**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಡೂರು**

**ಸಿಸಿ. ನಂ.4040/2024**

ಫಿರ್ಯಾದಿ : **ಸಖರಾಯಪಟ್ಟಣ ಪೊಲೀಸ್ ಠಾಣೆ**

ವಿರುದ್ಧ

ಆರೋಪಿಗಳು : 1. ಸೋಮಶೇಖರ ಬಿನ್ ಬಿ.ವಿ. ಶಂಕರಪ್ಪ, ಸುಮಾರು 59 ವರ್ಷ, ವ್ಯವಸಾಯ,

2. ನಂದಕುಮಾರ ಬಿನ್ ಬಿ.ಎ. ಶಂಕರಪ್ಪ, 57 ವರ್ಷ ವಯಸ್ಸು, ವ್ಯವಸಾಯ,

3. ಪುಷ್ಪ ಯಾನೆ ಅರಣಾಕ್ಷಿ ಕೋಂ ಸೋಮಶೇಖರ, ಸುಮಾರು 47 ವರ್ಷ, ಮನೆಕೆಲಸ,

ಆರೋಪಿತರೆಲ್ಲರೂ ಬಾಣೂರು ಗ್ರಾಮ, ಕಡೂರು ತಾಲ್ಲೂಕು. ವಾಸಿಗಳಾಗಿರುತ್ತಾರೆ.

**ಃದೋಷಾರೋಪಣೆಃ**

ಶ್ರೀಮತಿ ಸವಿತರಾಣಿ ಹೆಚ್.ವಿ., ಬಿ.ಎ.ಎಲ್., ಎಲ್.ಎಲ್.ಬಿ., 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ಕಡೂರು ಆದ ನಾನು ಈ ಮೂಲಕ ಕೆಳಕಂಡಂತೆ ಆಪಾದಿತರಾದ ನಿಮ್ಮಗಳ ಮೇಲೆ ಹೊರೆಸುವ ದೋಷಾರೋಪಣೆ.

ಸಖರಾಯಪಟ್ಟಣ ಪೋಲೀಸ್ ಠಾಣಾ ಸರಹದ್ದಿಗೆ ಸೇರಿದ ಶಿವಪುರ ಗ್ರಾಮದ ವಾಸಿಗಳಾದ ಚಾಸಾ-1 ಬಸವರಾಜಪ್ಪರವರಿಗೆ ಬಾಣೂರು ಗ್ರಾಮದ ಸರ್ವೆ ನಂ.135 ರಲ್ಲಿ ಜಮೀನು ಇರುತ್ತದೆ. ಸದರಿ ಜಮೀನಿನ ಖರಾಬ್ ಜಾಗದಲ್ಲಿರುವ ಕಾಲುವೆಯಲ್ಲಿ ಓಡಾಡಲು ದಾರಿ ಬಿಟ್ಟುಕೊಡುವ ವಿಚಾರವಾಗಿ ಚಾಸಾ-1 ರವರಿಗೂ ಆರೋಪಿತರಾದ ನಿಮಗೂ ತಕರಾರು ಇರುತ್ತದೆ. ಅಂತೆಯೇ ದಿನಾಂಕ 15.04.2024 ರಂದು ಸಂಜೆ 5.30 ಗಂಟೆ

ಸಮಯದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ-1 ರವರ ಜಮೀನಿಗೆ ಅಕ್ರಮ ಪ್ರವೇಶ ಮಾಡಿರುತ್ತೀರಿ. ಆದಕಾರಣ ಆರೋಪಿತರಾದ ನೀವು **ಭಾರತೀಯ ದಂಡ ಸಂಹಿತೆ ಕಲಂ 447 ಸಹವಾಚಕ ಕಲಂ 34** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯ ಒಳಗೆ ಮಾಡಿರುವಿರಿ.

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಸಮಾನ ಉದ್ದೇಶದಿಂದ ಮುಂದುವರಿದು, 1 ಮತ್ತು 2 ನೇ ಆರೋಪಿತರಾದ ನೀವು ಜಮೀನಿನಲ್ಲಿ ರಸ್ತೆ ಮಾಡುತ್ತಿದ್ದುದನ್ನು ನೋಡಿ, ಚಾಸಾ-1 ರವರು ಯಾಕಪ್ಪ ನನ್ನ ಜಮೀನಿಗೆ ನುಗ್ಗಿ ರಸ್ತೆಗಾಗಿ ಗುಂಡಿ ತೋಡಿದ್ದೀಯಾ ಎಂದು ಪ್ರಶ್ನಿಸಿದ್ದಕ್ಕೆ, 1 ನೇ ಆರೋಪಿಯಾದ ನೀವು ಚಾಸಾ-1 ರವರಿಗೆ ಸೂಳೇ ಮಗನೇ ಪಂಚಾಯ್ತಿಯವರು ರಸ್ತೆ ಮಾಡಿಕೋ ಎಂದು ನನಗೆ ತಿಳಿಸಿದ್ದಾರೆ, ನೀನ್ಯಾವನೋ ನನಗೆ ಕೇಳೋಕೆ ಎಂದು ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ. ಅಂತೆಯೇ ಚಾಸಾ-4 ಸಿದ್ದಮ್ಮರವರು ಏಕೆ ನನ್ನ ಗಂಡನಿಗೆ ಹೊಡೆಯುತ್ತೀರಾ ಎಂದು ಪ್ರಶ್ನೆ ಮಾಡಿದ್ದಕ್ಕೆ ಆರೋಪಿತರಾದ ನೀವು ಚಾಸಾ-4 ರವರಿಗೆ ಬೇವರ್ಸಿಮುಂಡೆ, ಹಲ್ಕಾ ಮುಂಡೆ, ಸೂಳೆಮುಂಡೆ ಎಂದು ಬೈದು, ಅವಮಾನ ಮಾಡಿ, ಸಾರ್ವಜನಿಕ ಶಾಂತಿಭಂಗವನ್ನುಂಟು ಮಾಡಿರುತ್ತೀರಿ. ಆದಕಾರಣ ಆರೋಪಿತರಾದ ನೀವು **ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ 34** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯ ಒಳಗೆ ಮಾಡಿರುವಿರಿ.

ಮೂರನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಸಮಾನ ಉದ್ದೇಶದಿಂದ ಮುಂದುವರಿದು, ಆರೋಪಿತರಾದ ನೀವುಗಳು 2 ನೇ ಆರೋಪಿಯಾದ ನೀವು ಚಾಸಾ-1 ರವರಿಗೆ ಕೈಗಳಿಂದ, ಕಾಲಿನಿಂದ ತಲೆಗೆ, ಮೈಕೈಗೆ ಹೊಡೆದಿದ್ದು, ಚಾಸಾ-4 ಸಿದ್ದಮ್ಮರವರು ಏಕೆ ನನ್ನ ಗಂಡನಿಗೆ ಹೊಡೆಯುತ್ತೀರಾ ಎಂದು ಪ್ರಶ್ನೆ ಮಾಡಿದ್ದಕ್ಕೆ, ಆರೋಪಿತರಾದ ನೀವು ಚಾಸಾ-4 ರವರ ತಲೆಕೂದಲನ್ನು ಹಿಡಿದು ಎಳೆದಾಡಿ ನೆಲಕ್ಕೆ ಬೀಳಿಸಿ ಸ್ವ ಇಚ್ಛೆಯಿಂದ ನೋವುಂಟು ಮಾಡಿರುತ್ತೀರಿ. ಆದಕಾರಣ 1 ಮತ್ತು 2 ನೇ ಆರೋಪಿತರಾದ ನೀವು **ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ ಕಲಂ 34** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯ ಒಳಗೆ ಮಾಡಿರುವಿರಿ.

ನಾಲ್ಕನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಸಮಾನ ಉದ್ದೇಶದಿಂದ ಮುಂದುವರಿದು, 1 ನೇ ಆರೋಪಿಯಾದ ನೀವು ದೊಣ್ಣೆಯಿಂದ ಚಾಸಾ–4 ರವರ ಬೆನ್ನಿಗೆ ಹೊಡೆದಿರುತ್ತೀರಿ. ಅಂತೆಯೇ 3 ನೇ ಆರೋಪಿಯಾದ ನೀವು ಚಾಸಾ–4 ರವರ ತಲೆಗೆ ಮಣ್ಣಿನ ಹೆಂಟೆಯಿಂದ ಹೊಡೆದು ಸ್ವ ಇಚ್ಛೆಯಿಂದ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಆದಕಾರಣ 1 ಮತ್ತು 2 ನೇ ಆರೋಪಿತರಾದ ನೀವುಗಳು **ಭಾರತೀಯ ದಂಡ ಸಂಹಿತೆ ಕಲಂ 324 ಸಹವಾಚಕ ಕಲಂ 34** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯ ಒಳಗೆ ಮಾಡಿರುವಿರಿ.

ಕೊನೆಯಾದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಸಮಾನ ಉದ್ದೇಶದಿಂದ ಮುಂದುವರಿದು, ಆರೋಪಿತರಾದ ನೀವು ಚಾಸಾ–1 ರವರಿಗೆ ಸೂಳೆಮಗನನ್ನು ಸಾಯಿಸದೇ ಹೋದರೆ ಈ ರಸ್ತೆಯ ಸಮಸ್ಯೆ ಸರಿಯಾಗುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿರುತ್ತೀರಿ. ಆದಕಾರಣ ಆರೋಪಿತರಾದ ನೀವು **ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ ಕಲಂ 34** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯ ಒಳಗೆ ಮಾಡಿರುವಿರಿ.

ಆದ್ದರಿಂದ ನೀವುಗಳು ಮೇಲ್ಕಂಡ ದಂಡನೀಯ ಅಪರಾದಗಳ ಮೇಲೆ ಈ ನ್ಯಾಯಾಲಯದಿಂದ **ವಿಚಾರಣೆಗೆ** ಒಳಪಡತಕ್ಕದ್ದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

1. ನಿಮಗೆ ಈಗ ಓದಿ ಹೇಳಿದ ಆರೋಪವು ತಿಳಿಯಿತೆ?

ಉತ್ತರಃ 1 ರಿಂದ 3 ನೇ ಆರೋಪಿತರು ಃ– ಹೌದು

2. ನಿಮ್ಮ ಮೇಲೆ ಇರುವ ಆರೋಪವನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕೆ?

ಉತ್ತರಃ 1 ರಿಂದ 3 ನೇ ಆರೋಪಿತರು ಃ– ವಿಚಾರಣೆಯಾಗಬೇಕು

ದಿಃ 20.02.2025

ಸಹಿ/–

**(ಶ್ರೀಮತಿ ಸವಿತರಾಣಿ ಹೆಚ್.ವಿ.)**
**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆಎಂಎಫ್‌ಸಿ, ಕಡೂರು.**